**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**

**Crl.Misc. No.:46/2010**

**ಆರ್ ಡಬ್ಲ್ಯೂ- 1**

ಹೆಸರು : ಸಿದ್ದಾಪ್ಪಾಜಿ

**ಸಾಕ್ಷಿಗೆ ಈ ದಿನ ದಿಃ 25.04.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯವಿಚಾರಣೆಃ** ಎದುರುದಾರರ ಪರ ಶ್ರೀಮತಿ ಎ ಟಿ ಎಸ್ ವಕೀಲರಿಂದಃ

ಮಂಡ್ಯ ಡಯೋಗೋಷ್ಟಿಕ್ ಸೆಂಟರ್ ಮತ್ತು ಅಶ್ವಿನಿ ಹೆಲ್ದ್ ಡಯೋಗೋಷ್ಟಿಕ್ ಸೆಂಟರ್ ರವರು ನೀಡಿರುವ ಎದುರುದಾರರ ವೈದ್ಯಾಕೀಯ ತಪಾಸಣಾ ವರದಿಗಳನ್ನು ಒಟ್ಟಾಗಿ ನಿಆರ್-6 ಎಂದು, ಸರ್ವೆ ನಂ.12/49 ರ ಆರ್ ಟಿ ಸಿ ಎಕ್ಸಟ್ರಾಕ್ಟನ್ನು ನಿಆರ್-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್ ವೈ ಜಿ ವಕೀಲರಿಂದ**

1 ನೇ ಅರ್ಜಿದಾರರು ನನ್ನ ಹೆಂಡತಿ ಮತ್ತು 2 ಮತ್ತು 3 ನೇ ಅರ್ಜಿದಾರರು ನನ್ನ ಮಕ್ಕಳು. ಮದುವೆ ಸಂದರ್ಭದಲ್ಲಿ ನನಗೆ ಒಡವೆ ವಸ್ತ್ರಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. 3-4 ಲಕ್ಷ ಹಣ ಖರ್ಚು ಮಾಡಿ 1 ನೇ ಅರ್ಜಿದಾರರ ಮನೆಯವರೇ ಮದುವೆ ಮಾಡಿಕೊಟ್ಟರು ಎಂದರೆ ಸರಿಯಲ್ಲ. ಮದುವೆಯ ನಂತರ 1 ನೇ ಅರ್ಜಿದಾರರು ನನ್ನ ಮನೆಯಲ್ಲೇ ಇದ್ದರು ಎಂದರೆ ಸರಿ. ಮದುವೆಯಾದ ನಂತರ ನಾವು 6 ತಿಂಗಳು ಮಾತ್ರ ಚೆನ್ನಾಗಿದ್ದೇವು. ನನಗೆ ಕುಡಿಯುವ ಹವ್ಯಾಸವಿದ್ದು, ನಾನು ಅವರಿಗೆ ಹೊಡೆಯುವುದು ಬಡಿಯುವುದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಜೂಜಾಟ ಸಹ ಆಡುತ್ತಿದ್ದೆ ಎಂದರೆ ಸರಿಯಲ್ಲ. ವರದಕ್ಷಿಣೆ ಕಿರುಕುಳದ ವಿಚಾರವಾಗಿ ಸಿಸಿ ನಂ.631/2007 ರಂತೆ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ನಂತರ ನ್ಯಾಯ ಪಂಚಾಯತಿಯಾಗಿ 1 ನೇ ಅರ್ಜಿದಾರರು ಪುನಃ ನನ್ನೊಟ್ಟಿಗೆ ಬಂದು ಉಳಿದುಕೊಂಡಿದ್ದರು ಎಂದರೆ ಸರಿ. ಅವರು ನನ್ನ ವಿರುದ್ದ ಪೋಲೀಸ್ ದೂರು ನೀಡಿದ್ದ ಕಾರಣ ಅವರನ್ನು ಮನೆಯಿಂದ ಮತ್ತೆ ಹೊರಹಾಕಿದೆ ಎಂದರೆ ಸರಿಯಲ್ಲ. ನಂತರ 1 ನೇ ಅರ್ಜಿದಾರರು ಸಿಮಿಸ್ 98/2004 ರಂತೆ ಜೀವನಾಂಶ ಕೋರಿ ಪ್ರಕರಣ ದಾಖಲಿಸಿದ್ದರು

ಎಂದರೆ ಸರಿಯಲ್ಲ. ಸದರಿ ಪ್ರಕರಣ ರಾಜಿ ಆದ ನಂತರ 1 ನೇ ಅರ್ಜಿದಾರರು ನನ್ನೊಟ್ಟಿಗೆ ಬಂದ್ದಿದರು ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಜೀವನಾಂಶ ಕೊಡುತ್ತಿಲ್ಲ.

ನೀವು ಮರಗೆಲಸ ಮಾಡುತ್ತೀರಾ ಎಂದರೆ ಸಾಕ್ಷಿಯು ಮುಂಚೆ ಮಾಡುತ್ತಿದ್ದೆ, ಈಗ ಮಾಡುತ್ತಿಲ್ಲಎಂದು ನುಡಿಯುತ್ತಾರೆ. ಸದರಿ ಕೆಲಸಕ್ಕೆ ನಾನು ಆಳುಗಳನ್ನು ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಸದರಿ ಕೆಲಸದಿಂದ ತಿಂಗಳಿಗೆ 1 ಲಕ್ಷ ಸಂಪಾದಿಸುತ್ತೇನೆಂದರೆ ಸರಿಯಲ್ಲ. ಸದರಿ ಹಣದಿಂದ ನಾನು ಹಲಗೂರಿನಲ್ಲಿ ಸೈಟ್ ಖರೀದಿಸಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೊಟೋ ತೋರಿಸಿದ್ದು, ಅದರಲ್ಲಿನ ಮನೆ ನನ್ನದಲ್ಲ ಎಂದು ನುಡಿಯುತ್ತಾರೆ.

ಉದಾರಹಳ್ಳಿಯಲ್ಲಿ ನನ್ನ ತಂದೆ ಹೆಸರಿನಲ್ಲಿ ಸರ್ವೆ ನಂ.57 ರಲ್ಲಿ 2 ಎಕರೆ ಜಮೀನು ಹೊಂದಿದ್ದೇನೆಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಜೀವನಾಂಶ ನೀಡಬೇಕಾಗುತ್ತದೆಂದು ಯಾವುದೇ ಸಂಪಾದನೆ ಇಲ್ಲ ಎಂದು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು 2 ಮತ್ತು 3 ನೇ ಅರ್ಜಿದಾರರ ಶಾಲಾ ಖರ್ಚು ಭರಿಸಿಲ್ಲ ಎಂದರೆ ಸರಿಯಲ್ಲ.

ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ದಾಖಲೆಗಳನ್ನು ಕೇಸಿಗಾಗಿ ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ಜೀವನಾಂಶ ನೀಡಬೇಕಾಗುತ್ತದೆಂದು ನ್ಯಾಯಾಲಯದ ಮುಂದೆ ನನ್ನ ಆರೋಗ್ಯ ಸರಿಯಿಲ್ಲ ಎಂದು ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ)**

**ಓ ಹೇ ಕೇ ಸರಿ ಇದೆ,**

**ಮೊದಲನೇ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ**
**ಕನಕಪುರ**

**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**

**Crl.Misc. No.:113/2023**

**P.W.:-**2

| | | |
|---|---|---|
| ಸಾಕ್ಷಿದಾರರ ಹೆಸರು | : | ಡಿ.ವಿ ಮಂಚೇಗೌಡ |
| ತಂದೆಯ ಹೆಸರು | ಃ | ವೆಂಕಟೇಗೌಡ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ಸ್ಥಳ | : | **ದೊಡ್ಡಗುಳಿ** |

<u>ಸಾಕ್ಷಿಗೆ ಈ ದಿನ ದಿಃ **27.04.2023** ರಂದು ಪ್ರಮಾಣ ವಚನ ಬೋಧಿಸಲಾಯಿತು.</u>

ಮೃತ **ಶಂಭುಲಿಂಗೇಗೌಡ** ನನಗೆ ಗೊತ್ತು**.** ಅವರು ನಮ್ಮ ಊರಿನವರು. ಅವರು **25.02.1995** ರಂದು **ದೊಡ್ಡಗುಳಿ** ಗ್ರಾಮದಲ್ಲಿ ಮೃತ ಪಟ್ಟಿರುತ್ತಾರೆ. **ಮೃತ ಶಂಭುಲಿಂಗೇಗೌಡ ರವರು ಪಿಡಬ್ಲ್ಯು-1 ರವರಿಗೆ ತಂದೆ** ಆಗಬೇಕು. ನನ್ನ ನೋಟರೈಸ್ಡ್ ಆಧಾರ್ ಕಾರ್ಡನ್ನು ಹಾಜರು ಪಡಿಸಿದ್ದು ಅದನ್ನು ಈಗಾಗಲೇ ನಿ ಪಿ **12** ಎಂದು ಗುರುತಿಸಲಾಗಿದೆ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಮೊದಲನೇ **ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ**
**ಕನಕಪುರ**

ಓ ಹೇ ಕೇ ಸರಿ ಇದೆ,